## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ.ತಳವಾರ್ ಸಾಬಣ್ಣ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.

ಪ್ರಶ್ನೆ: ಗ್ರಾಮೀಣ ಪ್ರದೇಶದ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಗ್ರಾಮಗಳಲ್ಲಿ ಉದ್ಯೋಗ ಸೃಷ್ಟಿ ಮಾಡುವ ದೃಷ್ಟಿಯಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯನ್ನು ಕೇಂದ್ರ ಸರಕಾರ ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯವನ್ನು ಒಳಗೊಂಡು ರಾಷ್ಟ್ರಾದ್ಯಂತ ಯಶಸ್ವಿಗೊಂಡಿತ್ತು. ಆದರೆ ಇಂದು ಕರ್ನಾಟಕ ರಾಜ್ಯದಲ್ಲಿ 'ನರೇಗಾ' ಯೋಜನೆ ಹಲವಾರು ಅಕ್ರಮಗಳು, ಹಾಜರಾತಿಯಲ್ಲಿ ಗೋಲ್ ಮಾಲ್, ಏಜೆಂಟರುಗಳ ಹಾವಳಿ, ವೇತನ ಸರಿಯಾಗಿ ಪಾವತಿಸದಿರುವುದು, ಆಸ್ತಿ ನಿರ್ಮಾಣವಾಗದಿರುವುದು, ಗ್ರಾಮೀಣ ಪ್ರದೇಶದ ವಲಸೆ ತಡೆಯದಿರುವುದು ಹೀಗೆ ಹಲವಾರು ಅಕ್ರಮಗಳು ಮತ್ತು ವೈಫಲ್ಯಗಳನ್ನು ನಾವು ಕಾಣುತ್ತೇವೆ. ಈ ನಿಟ್ಟಿನಲ್ಲಿ ಈ ಅಕ್ರಮಗಳ ತಡೆಗೆ/ಕಠಿಣ ಕ್ರಮಗಳು, ಗೊಂದಲಗಳು ಮತ್ತು ವೈಫಲ್ಯಗಳ ಕುರಿತು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ ಎಂಬುದರ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

*******

ಉತ್ತರ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು ಕರ್ನಾಟಕ ರಾಜ್ಯವನ್ನು ಒಳಗೊಂಡು ರಾಷ್ಟ್ರಾದ್ಯಂತ ಯಶಸ್ವಿಗೊಂಡಿದೆ. ಸದರಿ ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಅಕುಶಲ ಕೆಲಸ ಮಾಡಲು ಇಚ್ಛಿಸಿ ಬೇಡಿಕೆ ಸಲ್ಲಿಸಿದ ಕುಟುಂಬಗಳಿಗೆ ಹದಿನೈದು ದಿನಗಳೊಳಗೆ ಕೆಲಸ ನೀಡುವುದು ಇಲ್ಲವಾದಲ್ಲಿ ನಿರುದ್ಯೋಗ ಭತ್ಯೆ ಪಾವತಿಸಬೇಕಾಗುತ್ತದೆ. ಕೆಲಸ ಪಡೆದ ನಂತರ ಹದಿನೈದು ದಿನಗಳೊಳಗೆ ಕೂಲಿ ಪಾವತಿಯಾಗದಿದ್ದಲ್ಲಿ ಕೂಲಿ ಕಾರ್ಮಿಕರಿಗೆ 0.05% ವಿಳಂಬ ಪರಿಹಾರ ಭತ್ಯೆಯನ್ನು ಪಾವತಿಸಬೇಕೆಂದು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಅಕ್ರಮಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.

- ಕ್ರಿಯಾಯೋಜನೆ ಇಲ್ಲದೇ ಕಾಮಗಾರಿಗಳ ಅನುಷ್ಠಾನ ಮತ್ತು ಹೆಚ್ಚುವರಿ ಕ್ರಿಯಾ ಯೋಜನೆಗಳನ್ನು ತಡೆದು, ಅರ್ಹ ಫಲಾನುಭವಿಗಳು ಕಾಮಗಾರಿಗಳ ಆಯ್ಕೆಗಾಗಿ end2end Software ಅಭಿವೃದ್ಧಿಪಡಿಸಿ, ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಒದಗಿಸಲಾಗಿದೆ.
- Area Officer ತಂತ್ರಾಂಶದ ಮೂಖಾಂತರ ಸಹಾಯಕ ನಿರ್ದೇಶಕರು(ಗ್ರಾಉ), ಕಾರ್ಯನಿರ್ವಾಹಕ ಅಧಿಕಾರಿ, ಉಪಕಾರ್ಯದರ್ಶಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯುಕ್ತರಿಂದ ಕಾಮಗಾರಿ ಸ್ಥಳಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.
- ಯೋಜನೆ ಅನುಷ್ಠಾನದ ಅಕ್ರಮಗಳಿದ್ದಲ್ಲಿ ದೂರು ಸಲ್ಲಿಸಲು ಜಿಲ್ಲಾ ಮಟ್ಟದಲ್ಲಿ ಓಂಬುಡ್ಸ್‌ಪರ್ಸನ್ ಮತ್ತು ರಾಜ್ಯ ಮಟ್ಟದಲ್ಲಿ ಓಂಬುಡ್ಸ್ ಪರ್ಸನ್ ಮೇಲ್ಮನವಿ ಪ್ರಾಧಿಕಾರಗಳನ್ನು ಹಾಗೂ ಕಾಮಗಾರಿಯ ಅನುಷ್ಠಾನದ ಲೋಪದ ಕುರಿತು ವರದಿ ಮಾಡಲು ಪ್ರತ್ಯೇಕವಾಗಿ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದ್ದು, ನಿಯಮಿತವಾಗಿ ಸಾಮಾಜಿಕ ಪರಿಶೋಧನೆಯನ್ನು ಜರುಗಿಸಿ ಕಾಮಗಾರಿಯ ಅನುಷ್ಠಾನದ ಲೋಪ ದೋಷದ ಕುರಿತು ವರದಿ ಮಾಡಲಾಗುತ್ತದೆ.
- ನರೇಗಾ ಯೋಜನೆಯಡಿ ಅನುಷ್ಠಾನಗೊಂಡಿರುವ ಕಾಮಗಾರಿಗಳನ್ನು ಪರಿಶೀಲಿಸಲು ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ರವರುಗಳು (SQM) ನಿಯಮಿತವಾಗಿ ಕ್ಷೇತ್ರ ಭೇಟಿ ನೀಡಿ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳು/ಸಿಬ್ಬಂದಿಗಳಿಗೆ ತಾಂತ್ರಿಕ ವಿಷಯಗಳ ಕುರಿತು ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ. ಕ್ಷೇತ್ರ ಭೇಟಿ ಅವಧಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು SQM ರವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ ಹಾಗೂ ಆಯುಕ್ತಾಲಯದ ಪರಿಶೀಲನಾ ತಂಡಗಳು ನಿರಂತರವಾಗಿ ಕ್ಷೇತ್ರ ಭೇಟಿ ನೀಡಿ, ಯೋಜನೆಯ ಅನುಷ್ಠಾನದಲ್ಲಿ ಲೋಪವೆಸಗುವ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ. ಇದುವರೆವಿಗೂ 479 ಅಧಿಕಾರಿ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳಿಗೆ ನೋಟೀಸ್ ಜಾರಿಮಾಡಲಾಗಿದ್ದು, 20 ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ಮತ್ತು 07 ನರೇಗಾ ಹೊರಗುತ್ತಿಗೆ ಸಿಬ್ಬಂದಿಗಳನ್ನು ಕೆಲಸದಿಂದ ವಜಾಗೊಳಿಸಲಾಗಿದೆ.
- ಯೋಜನೆಯ ಅನುಷ್ಠಾನದ ಕುರಿತು ದೂರುಗಳಿದ್ದಲ್ಲಿ, ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಾಲತಾಣದಲ್ಲಿ CPGRAMS (ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮೇಲ್ವಿಚಾರಣೆ ವ್ಯವಸ್ಥೆ) ಮತ್ತು IPGRS (ಏಕೀಕೃತ ಸಾರ್ವಜನಿಕ ಕುಂದು ಕೊರತೆ ನಿವಾರಣ ವ್ಯವಸ್ಥೆ) ಯನ್ನು ಒದಗಿಸಲಾಗಿದೆ.

* ಜನವರಿ-2024 ರಿಂದ Google Spreadsheet ಪರಿಚಯಿಸಿ, ಸಾಮಗ್ರಿ ಬಿಲ್ಲು ಪಾವತಿಗೆ FTO ಸೃಜಿಸುವ ಮುನ್ನ 100% ಕಾಮಗಾರಿ ಕಡತ ಮತ್ತು ಸ್ಥಳವನ್ನು ಪರಿಶೀಲಿಸುವುದು ಕಡ್ಡಾಯಪಡಿಸಿದೆ. ಫೆಬ್ರವರಿ 2025ರ ಅಂತ್ಯಕ್ಕೆ 3,50,029 ಗಳಲ್ಲಿ 3,15.478 ಕಡತಗಳ ರೂ.2533.94/-ಕೋಟಿ ಮೊತ್ತವನ್ನು ತೃಪ್ತಿಕರ ಎಂದು ದಾಖಲಿಸಿದೆ.
* ಸಾರ್ವಜನಿಕರಿಗೆ ಕುಂದುಕೊರತೆಗಳ ನಿವಾರಣೆಗಾಗಿ ರಾಜ್ಯ ಸರ್ಕಾರದಿಂದ 82775 06000 ಏಕೀಕೃತ ಸಹಾಯವಾಣಿಯನ್ನು ಹಾಗೂ ವಾಟ್ಸ್‌ಆಪ್ ಚಾಟ್‌ಬಾಟ್ ನ್ನು ಒದಗಿಸಿದೆ.

ಹಾಜರಾತಿಯ ಧೃಢೀಕರಣಕ್ಕಾಗಿ NMMS App ಬಳಸಲಾಗುತ್ತಿದೆ. NMMS – ಸಮುದಾಯ ಆಧಾರಿತ ಕಾಮಗಾರಿಗಳ ಹಾಜರಾತಿಯನ್ನು capture ಮಾಡಿ real time upload ಮಾಡಲು NMMS App ನಲ್ಲಿ ಬಳಸಲಾಗುತ್ತಿದೆ. NMR ನಲ್ಲಿ ಹಾಜರಾತಿ ನೀಡಿರುವ ಜನರ ಸಂಖ್ಯೆಗೂ ಹಾಗೂ ಛಾಯಾಚಿತ್ರದಲ್ಲಿರುವ ಜನರ ಸಂಖ್ಯೆಯಲ್ಲಿರುವ ವ್ಯತ್ಯಾಸ/ಜನರಿಲ್ಲದ ಛಾಯಾಚಿತ್ರಗಳನ್ನು upload ಮಾಡುವುದನ್ನು ನಿಯಂತ್ರಿಸಲು head count ಮತ್ತು eye blink feature ನ್ನು ಅಳವಡಿಸುವುದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದೆ. 2024-25ನೇ ಸಾಲಿನಲ್ಲಿ 3.83 ಲಕ್ಷ ಸಮುದಾಯ ಆಧಾರಿತ ಕಾಮಗಾರಿಗಳ 18.80 ಲಕ್ಷ NMR ಗಳ ಹಾಜರಾತಿಯನ್ನು NMMS ಮುಖಾಂತರ ಸೆರೆಹಿಡಿಯಲಾಗಿದೆ.

ನರೇಗಾ ಯೋಜನೆಯು ವಿಶಿಷ್ಟವಾಗಿ ಗ್ರಾಮೀಣ ಪ್ರದೇಶದ ನೊಂದಾಯಿತ ಕೂಲಿ ಕಾರ್ಮಿಕರಿಗೆ ಅವರ ಬೇಡಿಕೆಗೆ ಅನುಗುಣವಾಗಿ 100 ದಿನಗಳ ಅಕುಶಲ ಕೂಲಿ ಕೆಲಸವನ್ನು ಒದಗಿಸುವುದಾಗಿದೆ ಆದ್ದರಿಂದ, ಏಜೆಂಟರು/ ಮಧ್ಯವರ್ತಿಗಳು/ ಗುತ್ತಿಗೆದಾರರಿಗೆ ಯಾವುದೇ ರೀತಿ ಅವಕಾಶವಿರುವುದಿಲ್ಲ.

* **ಬಾಕಿ ಕೂಲಿ ಪಾವತಿ ಮತ್ತು ಕೂಲಿ ಮೊತ್ತ ಬಿಡುಗಡೆಗೆ ಕ್ರಮ:**

ಮಹಾತ್ಮ ಗಾಂಧಿ ನರೇಗಾ ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಬೇಡಿಕೆಯನ್ವಯ ಕೇಂದ್ರ ಸರ್ಕಾರವು 100% ರಷ್ಟು ಕೂಲಿ ಮೊತ್ತವನ್ನು ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಬಿಡುಗಡೆ ಮಾಡುತ್ತದೆ. ಪ್ರಸ್ತುತ ಸಾಲಿನಲ್ಲಿ, ರಾಜ್ಯದಲ್ಲಿ ಶೇ. 99.61 ರಷ್ಟು ಕೂಲಿ ಮೊತ್ತ FTOಗಳನ್ನು 15 ದಿನಗಳೊಳಗೆ ಸೃಜಿಸಲಾಗಿದೆ. ಹಾಗೂ ಯೋಜನೆಯಡಿ ಕೆಲಸ ನಿರ್ವಹಿಸಿರುವ ಜನರಿಗೆ ಇಲ್ಲಿಯವರೆಗೆ ರೂ. 3850.42 ಕೋಟಿ ಮೊತ್ತ ನೇರವಾಗಿ DBT ಮುಖಾಂತರ ಪಾವತಿಸಲಾಗಿದೆ. ಪ್ರಸ್ತುತ ದಿನಾಂಕ:09.03.2025 ರಂತೆ, ಕೂಲಿ ಮೊತ್ತ ರೂ.521.63 ಕೋಟಿ ಬಾಕಿ ಇದ್ದು ಕೂಲಿ ಕಾರ್ಮಿಕರ ಖಾತೆಗಳಿಗೆ ಜಮೆಯಾಗುವುದು ಬಾಕಿ ಇರುತ್ತದೆ.

ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ Mother Sanction ನಲ್ಲಿ ಶೇ.75 ರಷ್ಟು ಅನುದಾನವು ಬಿಡುಗಡೆಯಾದ ನಂತರ ರಾಜ್ಯ ಸರ್ಕಾರ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಮರು ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ. ಈಗಾಗಲೇ ಕೇಂದ್ರ ಸರ್ಕಾರದಿಂದ 4808.50 ಕೋಟಿಗಳಿಗೆ Mother Sanction ನೀಡಿದ್ದು, ಸದರಿ ಮೊತ್ತದಲ್ಲಿ 3909.03 ರಷ್ಟು ಕೋಟಿ ಅನುದಾನವು ದಿನವಾರು ಬಿಡುಗಡೆಗೊಂಡಿದ್ದು, ಸದರಿ ಮೊತ್ತದಲ್ಲಿ 3850.42 ಕೋಟಿ ಅನುದಾನವು ವೆಚ್ಚವಾಗಿರುತ್ತದೆ. ಮುಂದುವರೆದು, ದಿನಾಂಕ:09.03.2025 ರಂತೆ, ಕೇಂದ್ರ ಸರ್ಕಾರದ Mother Sanction ಅನ್ವಯ ರಾಜ್ಯಕ್ಕೆ ಕೂಲಿ ಮೊತ್ತ ರೂ.899.00 ಕೋಟಿ ಬಿಡುಗಡೆಗೆ ಬಾಕಿ ಇದ್ದು, ಸದರಿ ಮೊತ್ತವು ದಿನವಾರು ಬಿಡುಗಡೆಗೊಳ್ಳುತ್ತಿದೆ. ಈ ಕುರಿತು ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪತ್ರ ವ್ಯವಹಾರ ಮತ್ತು ದೂರವಾಣಿ ಮುಖೇನ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಯೋಜನೆಯಡಿ ಕಲ್ಪಿಸಿರುವ ಸೌಲಭ್ಯಗಳನ್ನು ಪಡೆಯುವಂತೆ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಮೂಲಕ ಜಾಗೃತಿ ಮೂಡಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಲಾದ 13 ಕೋಟಿ ಮಾನವ ದಿನಗಳ ಗುರಿ ಎದುರಾಗಿ **11.57ಕೋಟಿ (90.46%)** ಮಾನವ ದಿನಗಳ ಕೆಲಸವನ್ನು 30,25,237 ಕುಟುಂಬಗಳ 54,88.385 ಕೂಲಿ ಕಾರ್ಮಿಕರಿಗೆ ನೀಡಲಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2024-25 ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

**ಸಂಖ್ಯೆ: ಗ್ರಾಅಪ/121(9)/ಉಖಾಯೋ/2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.